ದಿನಾಂಕಃ **16.04.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀ BMR ವಕೀಲರಿಂದಃ</u>**

ನನ್ನ ತಂದೆಯ ಹೆಸರು ಚಿಕ್ಕಣ್ಣ. ನಾನು **2** ಅಥವಾ **3** ನೇ ತರಗತಿಯವರೆಗೂ ವಿದ್ಯಾಬ್ಯಾಸ ಮಾಡಿರಬಹುದು. ಕನ್ನಡ, ಆಂಗ್ಲಭಾಷೆ ಓದಲು ಬರೆಯಲು ಬರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಕನ್ನಡದಲ್ಲಿ ಹೇಳಿ ಬರೆಸಿರುತ್ತೇನೆ. ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿಲ್ಲ. ನನ್ನನ್ನು ನ್ಯಾಯಾಲಯಕ್ಕೆ ವಾದಿ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ವಾದಿ ಪ್ರತಿವಾದಿ ಜಗಳ ಮಾಡಿಕೊಂಡು ಪಂಚಾಯ್ತಿಗೆ ಕರೆದಿದ್ದರು ಈ ಬಗ್ಗೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ನನ್ನ ಹಾಗೂ ವಾದಿ, ಪ್ರತಿವಾದಿಯ ಸ್ವಂತ ಊರು ರಾಮಯ್ಯನಪಾಳ್ಯ. ಪ್ರತಿವಾದಿಯ ತಂದೆಯ ಹೆಸರು ನನಗೆ ಗೊತ್ತು. ವಾದಿ ಹಾಗೂ ಪ್ರತಿವಾದಿಯ ತಂದೆಯ ನಡುವೆ ಆದ ವ್ಯಾಜ್ಯಗಳ ಬಗ್ಗೆ ಗೊತ್ತಿಲ್ಲ.

ಪಂಚಾಯ್ತಿಯನ್ನು ಪಾವಗಡದಲ್ಲಿ ಮಾಡಿರುತ್ತೇವೆ. ಹುಣಸೆ ಮರ, ತೆಂಗಿನ ಮರ ಹಾಗೂ ಬಾವಿಯ ಬಗ್ಗೆ ಬರವಣಿಗೆ ಆಗಿರುತ್ತದೆ. ಪಂಚಾಯ್ತಿ ಆದ ನಂತರ ಬರವಣಿಗೆ ಮಾಡಿ ಸಹಿ ಮಾಡಿರುತ್ತೇವೆ. ಆಗ ದೊಡ್ಡಯ್ಯ, ಶಾಂತಮ್ಮ, ವಾದಿ, ಪ್ರತಿವಾದಿ ಇದ್ದರು. ಇನ್ನೂ ಕೆಲವರು ಇದ್ದರು ಅವರು ಯಾರು ಎಂದು ಈಗ ಹೇಳಲು ಆಗುವುದಿಲ್ಲ.

ಎಷ್ಟು ರೂ. ಗಳ ಛಾಪಾಕಾಗದವನ್ನು ಯಾರು ತಂದಿರುತ್ತಾರೆಎಂದು ನನಗೆ ಗೊತ್ತಿಲ್ಲ, ಯಾರು ಬರೆದಿರುತ್ತಾರೆ ಎಂದು ಬಹಳ ವರ್ಷಗಳಾದ ಕಾರಣ ಹೇಳಲು ಆಗುವುದಿಲ್ಲ. **13** ವರ್ಷಗಳ ಹಿಂದೆ ಪಂಚಾಯ್ತಿ ಮಾಡಿರುತ್ತೇನೆ. ಯಾವುದೇ ಪಂಚಾಯ್ತಿ ಆಗಿರುವುದಿಲ್ಲ, ನಾನು ಯಾವುದೇ ಪಂಚಾಯ್ತಿ ಮಾಡಿರುವುದಿಲ್ಲ, ಆದರೂ ವಾದಿ ಮಾತು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ